ಒಂದೆರಡು ಓವರ್‌ಗಳಾಗಿರಬೇಕು. ಮೈದಾನದಲ್ಲಿ ಅಣ್ಣ ಎಲ್ಲಿಂದಲೋ ಪ್ರತ್ಯಕ್ಷನಾದ. ಕ್ರೀಸಿನತ್ತ ಅಂಬಿನಂತೆ ಓಡತೊಡಗಿದ. ಅವನ ಹಿಂದೆ ಗುಡಾಣದಂತ ಹೊಟ್ಟೆ ಹೊತ್ತ ಪೊಲೀಸಪ್ಪಗಳು, ಕ್ಷಣಕ್ಷಣಕ್ಕೂ ದಿಕ್ಕುಬದಲಿಸಿ ಓಡುತ್ತಿದ್ದ ಅಣ್ಣ ಮುಂದೆ ಮುಂದೆ ಏದುಸಿರು ಬಿಡುತ್ತಾ ಹಿಂಬಾಲಿಸುತ್ತಿದ್ದ ಪೊಲೀಸರು ಹಿಂದೆಹಿಂದೆ. ಪ್ರೇಕ್ಷಕರಿಗೆ ಈ ಓಟ ಕ್ರಿಕೆಟ್ಟಿಗಿಂತಲೂ ರೋಚಕವಾಗಿಬಿಟ್ಟಿತು. ಅವರ ನಡೆಗೆ ಹೊಂದುವಂತೆ ಚಪ್ಪಾಳೆ, ಸೀಟಿ, ನಗಾರಿಯಿಂದ ಸ್ಟೇಡಿಯಂ ತುಂಬಿಹೋಯಿತು. ಅಣ್ಣ ಹೀರೋ ಆಗಿಬಿಟ್ಟ! ಕಡೆಗೂ ಜಯಶಾಲಿಯಾಗಿ ವಿಕೆಟ್ ಕೀಪರ್ ಬಳಿಹೋಗಿ ಕೈಕುಲುಕಿದ. ಅವರ ನಡುವೆ ಅದೇನು ಮಾತುಕತೆಯಾಯಿತೋ. ಮರುನಿಮಿಷ ಅಣ್ಣ ನನ್ನ ಮುಂದೆ ಬಂದು ನಿಂತು ಪುಸ್ತಕ ನೀಡಿದ. ಭಗವತ್ಪ್ರಸಾದದಂತೆ ಅದನ್ನು ಸ್ವೀಕರಿಸಿ ಕಣ್ಣಿಗೊತ್ತಿಕೊಂಡೆ. ಪುಟ ಖಾಲಿಯಾಗಿತ್ತು.

'ಎಲ್ಲೋ ಆಟೋಗ್ರಾಫು?'

'ಓಡಿ ಹೋಗಿ ಅಲ್ಲಿ ನೋಡಿದ್ರೆ ಕೈಲಿದ್ದ ಪೆನ್ನು ಮಾಯ! ಓಡೋವಾಗ ಬಿದ್ದುಹೋಗಿತ್ತು. ಪಾಪ ಆ ವಿಕೆಟ್ ಕೀಪರಾದ್ರೂ ಬರೀ ಕೈನಲ್ಲಿ ಹೇಗೆ ಬರೀತಾನೆ? ಅದಕ್ಕೇ ಸುಮ್ನೆ ನನ್ನ ಕೈ ಕುಲಕ್ದ' ಎಂದ ತನ್ನ ಕೈಯನ್ನು ಪವಿತ್ರವಸ್ತು ಎಂಬಂತೆ ನೋಡುತ್ತಾ. ನಾನಲ್ಲೇ ಅಳತೊಡಗಿದೆ. ಅವನಿಗೆ ಅವಮಾನವಾಗಿರಬೇಕು. ಹತ್ತಿರ ಬಂದ.

'ಅಳಬೇಡ್ವೇ ಅಳುಮುಂಜಿ. ಅದನ್ನ ಇಲ್ಲಿ ಕೊಡು. ಇವತ್ತು ಹೇಗಾದ್ರೂ ನಿನಗೆ ಒಂದು ಆಟೋಗ್ರಾಫ್ ತಂದು ಕೊಟ್ಟೇ ಕೊಡ್ತೀನಿ. ಪ್ರಾಮಿಸ್' ಎಂದು ಹೋದವ ಹತ್ತೇ ನಿಮಿಷದಲ್ಲಿ ನನ್ನ ಮುಂದೆ ನಿಂತಿದ್ದ. ತೆರೆದು ನೋಡಿದೆ. ಕೋಳಿಕಾಲಿನಂತಹ ಬರಹ. ಓದಲು ಸಾಧ್ಯವೇ ಇರಲಿಲ್ಲ. 'ಯಾರ್‍ದ್ದೋ ಇದು? ಓದಕ್ಕೆ ಸಾಧ್ಯವೇ ಇಲ್ಲ.'

'ನಂಗೇನ್ಗೊತ್ತು ಈ ಬ್ರಹ್ಮಲಿಪಿ ಯಾರದೂಂತ? ಕಾಮೆಂಟರಿ ಬಾಕ್ಸ್‌ಗೆ ಹೋದೆ. ಅಲ್ಲೊಬ್ಬ ಕೆಂಪಗಿದ್ದ. ಅವ್ನು ಆಸ್ಟ್ರೇಲಿಯಾದವ ಅಂತ ಅನ್ನಿಸಿತು. ಕೇಳಿದೆ. ಸಂತೋಷದಿಂದ ಬರೆದು ಕೊಟ್ಟ. ನಿನ್ನನ್ನು ಯಾರಾದ್ರೂ ಯಾರ್‍ದ್ದೂಂತ ಕೇಳಿದ್ರೆ ಡಾನ್ ಬ್ರಾಡ್ಮನ್‌ದು ಅಂತ ಹೇಳ್ಬಿಡು. ಯಾರ್ಗೂ ಈ ಕೋಳಿಕಾಲು ಬರಹ ಓದೋಕ್ಕಾಗೊಲ್ಲ.' ತನ್ನ ನರಿ ಬುದ್ಧಿಯಲ್ಲಿ ನನಗೂ ಪಾಲಿತ್ತ ನನ್ನಣ್ಣ!

ಅಂದು ಕಾಲೇಜಿನಲ್ಲಿ ಪಿಯುಸಿ ಪರೀಕ್ಷೆಯ ಕೊನೆಯ ದಿನ. ನಮ್ಮನ್ನು ಬೀಳ್ಕೊಡುವ ಸಮಾರಂಭ ಅಂದು ಸಂಜೆ ನಡೆಯಲಿತ್ತು. ನಾವು ಹೆಣ್ಣು ಮಕ್ಕಳು ಸ್ವಭಾವತಃ ಭಾವುಕರು. ಪ್ರೀತಿಯ ಕಾಲೇಜನ್ನು ಬಿಟ್ಟು ಹೋಗಲಾರದೆ ನಮ್ಮೆಲ್ಲರ ಕಣ್ಣುಗಳಲ್ಲಿ ಅಶ್ರುತರ್ಪಣ ನಡೆದಿತ್ತು. ಸದಾ ಬೈಯುತ್ತಾ ಬುದ್ಧಿ ಹೇಳಿ ಹೇಳಿ ಚಿಟ್ಟು ಹಿಡಿಸುತ್ತಿದ್ದ ಮೇಡಮ್ಮುಗಳು ಕೂಡಾ ಅಂದು ಹಸನ್ಮುಖದಿಂದ ಭಾಷಣದಲ್ಲಿ ನಮ್ಮನ್ನು ಹೊಗಳಿ ಅಟ್ಟಕ್ಕೇರಿಸಿ ಶುಭ ಹಾರೈಸಿದಾಗ ನಮ್ಮೆಲ್ಲರ ಅಳು ಇನ್ನೂ ಹೆಚ್ಚಾಯಿತು. ಅಂದು ಸಹಪಾಠಿಗಳ ಹಾಗೂ ಮೇಡಮ್ಮುಗಳ ಹಸ್ತಾಕ್ಷರಗಳಿಂದ ನನ್ನ ಆಟೋಗ್ರಾಫ್ ಬುಕ್ಕು ತುಂಬಿಹೋಯಿತು. ಕೊನೆಗೆ ಉಳಿದದ್ದು ಒಂದೇಪುಟ. ಅದನ್ನು ಶಾಲೆಯ ಜವಾನ ವೆಂಕಟಯ್ಯ ತನ್ನ ಮೋಡೀ ಅಕ್ಷರದಲ್ಲಿ 'ವೆಂಕಟೇಸಯ್ಯಾ' ಎಂದು ಬರೆದು ಮಂಗಳ ಹಾಡಿದ. ಆ ಪುಸ್ತಕ ಅಟ್ಟದ ಪೆಟ್ಟಿಗೆಗೆ ಸೇರಿ ಈಗೆಷ್ಟೋ ವರ್ಷಗಳಾಗಿವೆ.

### ಉಪಸಂಹಾರ

ಮೊನ್ನೆ ಮೊನ್ನೆ ಶಾಲೆಯೊಂದರ ವಾರ್ಷಿಕೋತ್ಸವಕ್ಕೆ ಹೋಗಿದ್ದೆ. ಮುಖ್ಯಅತಿಥಿಯಾಗಿ ಬರಬೇಕಿದ್ದ ಸಚಿವೆಯೊಬ್ಬರು ಅನಿವಾರ್ಯ ಕಾರಣಗಳಿಂದ ಬರಲಿಲ್ಲವೆಂದು ನನ್ನನ್ನೇ ಬಹುಮಾನವಿತರಣೆ ಮಾಡಲು ಪರಿಚಯದ ಹೆಡ್‌ಮೇಡಂ ಕೇಳಿಕೊಂಡರು. ಸಂಕೋಚದಿಂದ